<u>ಸಾಕ್ಷಿಯನ್ನು ದಿಃ03-03-2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಪಾಟೀ ಸವಾಲು : ಎದುರುದಾರ ಪರ ಶ್ರೀ ಎಂ ಬಿ ಹೆಚ್ ವಕೀಲರಿಂದ</u>**

ನಾನು ಮತ್ತು ಅರ್ಜಿದಾರಳು ಸಂಬಂಧಿಕರು ಇರುವುದಿಲ್ಲ. ಮಹಾಲಿಂಗಪೂರ ಮತ್ತು ಬಿಜಾಪೂರದಲ್ಲಿ ನನ್ನ ಯಾವುದೇ ಆಸ್ತಿ ಇರುವುದಿಲ್ಲ. ಮಹಾಲಿಂಗಪೂರದಲ್ಲಿ ನನ್ನ ತಾಯಿ ತವರು ಮನೆ ಇದೆ. ಅರ್ಜಿದಾರಳ ತವರು ಮನೆ ಪಶ್ಚಿಮ ದಿಕ್ಕಿಗೆ ಮುಖ ಮಾಡಿ ಇದೆ. ಆಕೆಯ ಮನೆಯ ಉತ್ತರಕ್ಕೆ ಮುಕುಂದ ಇವರ ಮನೆ ಇರುತ್ತದೆ. ದಕ್ಷಿಣಕ್ಕೆ ಎಸ್  ಬ್ಯಾಂಕ ಇರುತ್ತದೆ. ಆಕೆಯ ಮನೆ ಹಿಂದುಗಡೆ ಮೊಟಾರ ಸೈಕಲ್ ಗ್ಯಾರೇಜ್ ಇರುತ್ತದೆ.

ಅರ್ಜಿದಾರಳು ಮತ್ತು ಎದುರುದಾರ ನಂ. 1 ಇವರ ಮದುವೆಯಾದ ನಂತರ ಅರ್ಜಿದಾರಳ ತವರು ಮನೆಗೆ ನಾನು ಸುಮಾರು 8 ರಿಂದ 10 ಸಲ ಹೋಗಿರುತ್ತೇನೆ. ಬಿಜಾಪುರದ ಎದುರುದಾರನ ಮನೆಗೆ ನಾನು 2014 ನೇ ಇಸವಿಯ ನವೆಂಬರ್ ತಿಂಗಳಿನಲ್ಲಿ ಹಿರಿಯರಾದ ಬೀಸನಕೊಪ್ಪ ಊರಿನ ಭೀಮಪ್ಪ ಬಿಳ್ಳೂರ, ಮಹಾಲಿಂಗಪೂರದ ಪ್ರಹ್ಲಾದ ಹುಕ್ಕೇರಿ, ಶಿವಾಪೂರದ ಗುರುಪಾದಪ್ಪ ಮತ್ತು ಸಂಗಪ್ಪ ಕಿತ್ತೂರ ಇವರೆಲ್ಲರೂ  ಹೋಗಿದ್ದೆವು. ಆಗ ಮಹಾಲಿಂಗಪೂರದವರು ಒಬ್ಬರೇ ಬಂದಿದ್ದರು. ಅರ್ಜಿದಾರಳ ತಂದೆ ನಮ್ಮನ್ನು ಕರೆದಿದ್ದು ಎದುರುದಾರ ನಂ. 1 ಪೋನ ಮಾಡಿ ನಮಗೆ ಬರಲು ಹೇಳಿದ್ದಾರೆಂದು ಹೇಳಿದ್ದಕ್ಕೆ ನಾವು ಹೋಗಿದ್ದೆವು. ಈ ಕುರಿತು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿಲ್ಲ. ನಾವು ಮೇಲೆ ಹೇಳಿದಂತೆ ಹೋಗಿದ್ದೆವು ಎಂದು ಸುಳ್ಳು ಹೇಳುತ್ತಿರುವುದರಿಂದ ಸದರಿ ವಿಷಯವನ್ನು ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ.

ಮದುವೆ ಕಾಲಕ್ಕೆ ಬಾಂಡೆ ಖರೀದಿ ಮಾಡಲು ಮಹಾಲಿಂಗಪೂರ ಒಂದು ಅಂಗಡಿಗೆ ನಾನೂ ಹೋಗಿದ್ದೆ. ಆಗ ಬಾಂಡೆ ಖರೀದಿ ರಶೀದಿಯನ್ನು ತೆಗೆದುಕೊಂಡಿದ್ದಾರೆ. ಸುಮಾರು 95 ಸಾವಿರ ಹಣದ ಬಾಂಡೆ ಖರೀದಿ ಮಾಡಿದ್ದರು. ನಾನು 2 ಲಕ್ಷ ರೂಪಾಯಿಯ ಗೃಹೋಪಯೋಗಿ ಸಾಮಾನು ಖರೀದಿ ಮಾಡಲು ಹೋಗಿರಲಿಲ್ಲ. ಸದರಿ ಗೃಹೋಪಯೋಗಿ ವಸ್ತುಗಳನ್ನು ಕೊಟ್ಟಿರುತ್ತಾರೆ ಎಂದು ಅರ್ಜಿದಾರಳು ಹೇಳಿದ್ದರಿಂದ ಅದನ್ನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆಸಿದ್ದೇನೆ. ಆ ಕುರಿತು ನನಗೆ ವಯಕ್ತಿಕ ಮಾಹಿತಿ ಇರುವುದಿಲ್ಲ. 8 ತೊಲೆ ಬಂಗಾರವನ್ನು ಮಹಾಲಿಂಗಪೂರದ ವೆಂಕಣ್ಣ ಗುಂಡ ಇವರ ಅಂಗಡಿಯಿಂದ ಖರೀದಿ ಮಾಡಿ ಅರ್ಜಿದಾರಳಿಗೆ ಕೊಟ್ಟಿರುತ್ತಾರೆ. ಮದುವೆ ಕಾಲಕ್ಕೆ ವಧು ಮತ್ತು ವರನ ಕಡೆಯವರು ಒಬ್ಬರಿಗೊಬ್ಬರು ಏನು ಕೊಟ್ಟಿದ್ದಾರೆಂದು ನನಗೆ ವಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. 2 ಲಕ್ಷ ರೂಪಾಯಿಯ ಬೆಳ್ಳಿ ಕುರಿತು ನನ್ನ ಪ್ರಮಾಣ ಪತ್ರದಲ್ಲಿ ಹೇಳಿ

ಬರೆಸಿದ್ದೇನೆ.

ನಾನು 10 ನೇ ತರಗತಿಯವರೆಗೆ ಶಾಲೆ ಕಲಿತಿದ್ದೇನೆ. ಅರ್ಜಿದಾರಳು ಮತ್ತು 1 ನೇ ಎದುರುದಾರನ ಮದುವೆ ದಿಃ 13-12-2013 ರಂದು ಆಗಿರುತ್ತದೆ ಎಂದು ಹೇಳಿ ಬರೆಸಿದ್ದೇನೆ. ಆ ಕಾಲಕ್ಕೆ ಮದುವೆ ಪೊಟೋ ಮತ್ತು ವಿಡಿಯೋ ಮಾಡಿರುತ್ತಾರೆ. ನಾನು ಮದುವೆ ಪೋಟೋ ಮತ್ತು ವಿಡಿಯೋದಲ್ಲಿ ಇಲ್ಲ ಎಂದರೆ ನಾನು ಇಲ್ಲದ ಜಾಗದಲ್ಲಿ ಪೋಟೋ ಹೊಡೆದಿರುತ್ತಾರೆ. ನಾನು ಅಕ್ಷತೆ ಹಾಕಲು ಮದುವೆ ವೇದಿಕೆಗೆ ಹೋಗಿರುವುದಿಲ್ಲ ದೂರದಲ್ಲಿ ಅಕ್ಷತೆ ಹಾಕಿರುತ್ತೇನೆ. ಯಾವ ದಿನಾಂಕದಂದು ನಾನು ಅರ್ಜಿದಾರಳ ತವರು ಮನೆಗೆ ಹೋಗಿದ್ದೆ ಎಂದು ಹೇಳಲು ಬರುವುದಿಲ್ಲ. ನಿಖರವಾಗಿ ಎಷ್ಟು ದಿನ ಅವರ ಮನೆಗೆ ಹೋಗಿದ್ದೇನೆಂದು ಹೇಳಲು ಬರುವುದಿಲ್ಲ. ಆಗ ಆಕೆಯ ತಂದೆ ಮತ್ತು ಅಣ್ಣ ಇರುತ್ತಿದ್ದರು.

ಅರ್ಜಿದಾರಳ ಮತ್ತು 1 ನೇ ಎದುರುದಾರನ ನಡುವೆ ನನ್ನ ಸಮಕ್ಷಮ ಯಾವುದೇ ತಂಟೆ ತಕರಾರು ಆಗಿರುವುದಿಲ್ಲ ಎಂದರೆ ಸರಿ. ಆದರೆ ಅವರು ಹೇಳಿರುತ್ತಾರೆ. ಅರ್ಜಿದಾರಳು ಮತ್ತು ಆಕೆಯ ತಂದೆ ಹೇಳಿದಂತೆ ಮಾಹಿತಿಯನ್ನು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿದ್ದೇನೆ ಎಂದರೆ ಸರಿ. ಅದರ ಬಗ್ಗೆ ನನಗೆ ವಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ.

ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು,

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ. ಕೇ. ಸರಿ ಅದೆ

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ., ಬನಹಟ್ಟಿ .